JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕನಕದಾಸರ ರಾಮಧಾನ್ಯ ಚರಿತೆಯಲ್ಲಿ ಆಹಾರ ಸಾಂಸ್ಕೃತಿಕ ಸಂಘರ್ಷದ ನೆಲೆ

- ಡಾ. ಶಿವಲಿಂಗಪ್ಪ ಆಯ್. ಭಂಡಾರಿ

ವಚನ ಚಳುವಳಿಯ ನಂತರ ಜನಸಮ್ಮುಖಿಯಾದ ಸಾಹಿತ್ಯ ಯಾವುದಾದರೂ ಇದ್ದರೆ, ಅದು ದಾಸ ಸಾಹಿತ್ಯ.. ದಾಸ ಪದದ ಶಬ್ದಶಃ ಅರ್ಥ ಸೇವಕ. ಒಂದರ್ಥದಲ್ಲಿ ಪರಮಾತ್ಮನನ್ನು ಆರಾಧಿಸುವ ಆರಾಧಕ ಎಂದಾದರೆ, ಇನ್ನೊಂದು ಅರ್ಥದಲ್ಲಿ ಜನರ ದುಃಖ-ದುಮ್ಮಾನಗಳಲ್ಲಿ ಭಾಗಿಯಾಗಿ ಪರಿಹಾರ ಮಾರ್ಗ ತೋರಿಸುವ ಸಾಧಕ ಎಂದಾಗುತ್ತದೆ. ವಚನ ಸಾಹಿತ್ಯ ಭಕ್ತಿ ಮಾರ್ಗದ ಮೂಲಕ ಕಾಯಕ(ದುಡಿಮೆ)ದಲ್ಲಿ ನಿರತನಾಗಿ ಶಿವನನ್ನು ಸಾಕ್ಷಾತ್ಕರಿಸಿಕೊಂಡರೆ, ದಾಸ ಸಾಹಿತ್ಯದಲ್ಲಿ 'ದಾಸ' ಎಂಬುದು ದೇವನ ಸೇವಕನಾಗಿ, ಜನರ ಕಷ್ಟ-ಸುಖಗಳಲ್ಲಿ ಭಾಗಿಯಾಗಿ ಆತ್ಮವನ್ನು ಶುದ್ಧೀಕರಿಸಿ, ಮೋಕ್ಷದತ್ತ ಕೊಂಡೊಯ್ಯುವ ಸಾಧಕ. ವಿದ್ವಾಂಸರು ಹೇಳುವಂತೆ "ದಾಸನಾಗುವದೆಂದರೆ ಬರೀ ಧೈನ್ಯತೆಯ ಪ್ರತಿಪಾದನೆಯಲ್ಲಿ ಒಂದು ಬಗೆಯ ಸರ್ವೋನ್ನತವಾದ ಲೌಖಿಕ ಸ್ವಾತಂತ್ರ್ಯದ ಪ್ರತಿಪಾದನೆ"[೧] ಮೂಲದಲ್ಲಿದ್ದ ಪದ 'ಭಕ್ತ' ನಂತರದಲ್ಲ' ದಾಸ ಎಂದಾಯಿತು. ಈ ಎರಡು ಪದಗಳು ಅರ್ಥ ವೈಶಾಲ್ಯತೆ ಉಳ್ಳವಾಗಿದ್ದು ಜ್ಞಾನ, ಉಪಾಸನೆ, ಆರಾಧನೆ, ಸೇವೆ ಎಂಬರ್ಥವನ್ನು ಪಡೆದುಕೊಂಡಿವೆ. 'ದಾಸ' ಎಂದರೆ ನಿಸ್ವಾರ್ಥ ನಿಷ್ಠೆಯ ಆಧ್ಯಾತ್ಮಿಕ ಸಾಧಕನೊಬ್ಬ ಆತ್ಮನೊಂದಿಗೆ ನಿರಂತರವಾಗಿ ನಡೆಸುವ ಅನುಸಂಧಾನದ ಕ್ರಿಯೆ. ಈ ಕ್ರಿಯೆಯನ್ನು ನಡೆ-ನುಡಿಗಳಲ್ಲಿ ಭಾಗಶಃ ಅಳವಡಿಸಿಕೊಂಡು ಬದುಕು ಸವೆಸಿದವನು ತಮ್ಮಪ್ಪ ನಾಯಕ(ಕನಕದಾಸ)'.

ಪವಿತ್ರವಾದ ಕನ್ನಡದ ಪುಣ್ಯಭೂಮಿಯಲ್ಲಿ ಹರಿದಾಸ ಪರಂಪರೆಯನ್ನು ಒಪ್ಪಿಕೊಂಡು, ಆಧ್ಯಾತ್ಮವನ್ನು ಎದೆಗ'ಪ್ಪಿಕೊಂಡು ಸಾಮಾಜಿಕ ಪರಿವರ್ತನೆಯ ಹರಿಕಾರನಾದ ಅಪರೂಪದ ಸಂತ ಕವಿ ಕನಕದಾಸ. ಕವಿಚರಿತೆಕಾರರು ನಿರ್ಧಿಷ್ಟ ಪಡಿಸಿರುವಂತೆ ಕನಕನ ಕಾಲ ಕ್ರಿ.ಶ. ೧೫೫೦. ಈ ಸಂದರ್ಭಕ್ಕಾಗಲೇ ಶೈವ, ವೈಷ್ಣವ, ಮಾಧ್ವಮತದ ಪ್ರಾಮುಖ್ಯತೆಗಳ ತಿಕ್ಕಾಟವೊಂದು ನಡೆದಿತ್ತು. ಶೂದ್ರ ಜಾತಿಯ ಕನಕ ಒಂದೊಂದು ಮೆಟ್ಟಿಲನ್ನೇರಿ ತಮ್ಮನ್ನು ತಾವು ಸಮರ್ಪಿಸಿಕೊಂಡ ವೈಷ್ಣವ ಪಂಥದ ಆಚರಣೆಗಳ ವಿರುದ್ಧ ಸಾಹಿತ್ಯ ಅಭಿವ್ಯಕ್ತಿಯ ಮೂಲಕ ಸಾಂಸ್ಕೃತಿಕ ಸಂಘರ್ಷವನ್ನುಂಟುಮಾಡಿ ಸಾಮಾಜಿಕ ಸಮಾನತೆಗಾಗಿ ಮಾನವೀಯತೆಯನ್ನು ಪ್ರತಿಷ್ಠಾಪಿಸಲು ಹಂಬಲಿಸಿದರು.

**ಚಾರಿತ್ರಿಕ ಹಿನ್ನೆಲೆ :**

ದಾಸ ಸಾಹಿತ್ಯದ ಪೂರ್ವದಲ್ಲಿದ್ದುದು ವಚನ ಸಾಹಿತ್ಯ. ವಚನ ಚಳುವಳಿಯ ಕಾಲಘಟ್ಟದಲ್ಲಿ ಹಲವು ಜಾತಿ-ಜನಾಂಗಗಳ ಹಿನ್ನೆಲೆಯಿಂದ ಬಂದ ಪುರುಷ ಮತ್ತು ಸ್ತ್ರೀಯರು ಅನುಭವ ಮಂಟಪದಲ್ಲಿ ಸೇರಿ, ಚರ್ಚಿಸುವ ಇಲ್ಲವೆ ಅಭಿಪ್ರಾಯ ಮಂಡಿಸುವ ಅವಕಾಶ ಒಂದೆಡೆ ಪಡೆದುಕೊಂಡಿದ್ದರು. ಇನ್ನೊಂದೆಡೆ ಬೆಂಕಿಯ ಕೆಂಡದಂತೆ ಬಿಸಿ ಮುಟ್ಟಿಸುತ್ತಲೇ ಬಂದಿರುವ ಜಾತಿಯತೇ, ಅಸ್ಪೃಶ್ಯತೆ, ಲಿಂಗ ತಾರತಮ್ಯ, ವರ್ಗಗಳಲ್ಲಿಯ ಅಸಮಾನತೆ, ಅಂಧಾನುಕರಣೆ ಮತ್ತು ಸಂಪ್ರದಾಯದಂತಹ ಗೊಡ್ಡು ಆಚರಣೆಗಳು ಭಾರತೀಯ ಚರಿತ್ರೆಯಲ್ಲಿ ಮುಖಾ-ಮುಖಿಯಾಗಿದ್ದವು. ಇಂತಹ ದಿನಗಳಲ್ಲಿ, ಜನಗಳ ಆಡು ನುಡಿಗಳನ್ನು ಬಳಸಿಕೊಂಡು ಶರಣರು ವಚನಗಳನ್ನು ರಚಿಸಿ ಧಾರ್ಮಿಕ ಪರಿವರ್ತನೆಯನ್ನು ಜೊತೆಗೆ, ಮಾನವೀಯ ಸಮಾಜ ನಿರ್ಮಾಣದ ಕನಸಿಗಾಗಿ ತವಕ ಪಟ್ಟಿದ್ದು ಇಂದು ಇತಿಹಾಸ.

ವಚನ ಸಾಹಿತ್ಯದ ನೆರಳನ್ನು ಆವರಿಸಿಕೊಂಡು ಬೆಳೆದಂತೆ ಕಾಣುವ ಹಾಗೂ ಶೂದ್ರ ಹಿನ್ನೆಲೆಯಿಂದ ಬಂದ ಕನಕದಾಸ ಇಡೀ ದಾಸ ಸಾಹಿತ್ಯದಲ್ಲಿ ಭಿನ್ನವಾಗಿ ನಿಲ್ಲುತ್ತಾರೆ. ಹರಿದಾಸರು ವಚನಕಾರರಂತೆ ತಾವು ನಂಬಿಕೊಂಡು ಬಂದಿದ್ದ ಭಕ್ತಿ ಮತ್ತು ಭಾವಗಳನ್ನು ಜನಸಾಮಾನ್ಯರ ಭಾಷೆಯಲ್ಲಿ ಮಂಡಿಸಲು ಪ್ರಯತ್ನಿಸಿದರಾದರೂ ಬಹುಪಾಲು ಹರಿದಾಸರು ಮಡಿವಂತಿಕೆಯನ್ನು ಮೀರಿ ಬದುಕಲು ಸಾಧ್ಯವಾಗಲೇ ಇಲ್ಲ. ಕನಕದಾಸರನ್ನು ಹೊರತುಪಡಿಸಿದರೆ ಸಾಂಪ್ರದಾಯಕ ಅಸಮಾನತೆಗಳನ್ನು ವಿರೋಧಿಸಿ ಬಾಳಿದವರು ಬಹಳ ಕಡಿಮೆ.

**ಪಾಳೆಗಾರಿಕೆಯಿಂದ ವೈರಾಗ್ಯದೆಡೆಗೆ :**

ವಿಜಯನಗರದ ಅರಸು' ಪಾಳೆಗಾರಿಕೆಯಲ್ಲಿದ್ದ ತಿಮ್ಮಪ್ಪ ಚತುರಮತಿಯ ಪ್ರತಿಭಾವಂತ ಆದರ್ಶ ಆಡಳಿತಗಾರ. ೨೮ ಗ್ರಾಮಗಳ ನಾಡಗೌಡಿಕೆಯ ಅಧಿಕಾರ ಪಡೆದ ಬಾಡಗ್ರಾಮದ ದಂಡನಾಯಕ ಕನಕದಾಸ[೨], ಒಮ್ಮೆ ಕೃಷಿಗಾಗಿ ಭೂಮಿಯನ್ನು ಅಗೆಯಿಸುತ್ತಿದ್ದಾಗ ಆಕಸ್ಮಿಕವಾಗಿ ಲಭ್ಯವಾದ 'ನಿಧಿ'ಯನ್ನು ಕಾಗಿನೆಲೆಯ ಆದಿಕೇಶವನ ದೇವಾಲಯವನ್ನು ಕಟ್ಟಿಸಿ ಪುಣ್ಯಕಾರ್ಯ ಕೈಕೊಂಡ. ತನಗೆ ದೈವದತ್ತವಾಗಿ ಪ್ರಾಪ್ತವಾದ ಕನಕವನ್ನು ಸಮಾಜಿಕ ಮತ್ತು ಧಾರ್ಮಿಕ ಪುಣ್ಯಕಾರ್ಯಕ್ಕಾಗಿ ಉಪಯೋಗಿಸಿದುದರಿಂದ ತಿಮ್ಮಪ್ಪ-ಕನಕನಾದ. ಆಗಾಗ ಕನಸಿನಲ್ಲಿ ಬಂದು ಕರೆಯುವ ಕೃಷ್ಣನ ಕರೆಗೆ ಓಗೊಟ್ಟು, ಆಧ್ಯಾತ್ಮ ಜೀವನಕ್ಕೆ ವಾಲಿದ. ವಿಜಯನಗರದ ವ್ಯಾಸರಾಯರ ಶ್ರೀಮಠದ ಸನ್ನಿಧಿಗೆ ಸೇರಿ, ವ್ಯಾಸರಾಯರಿಂದ ದೀಕ್ಷೆ ಪಡೆದು ಕನಕ-ಕನಕದಾಸರಾದರು. ವ್ಯಾಸರಾಯರ ಶಿಷ್ಯರ'ಲ್ಲಿ ವಾದಿರಾಜ, ವಿಜಯಿಂದ್ರದಾಸ, ವೈಕುಂಠದಾಸ, ಪುರಂದರದಾಸ ಈ ಶಿಷ್ಯರ ಸಾಲಿಗೆ ಸೇರಿದ ಏಕೈಕ ವ್ಯಕ್ತಿ(ತಿಮ್ಮಪ್ಪ) ಕನಕದಾಸರು. ಶೂದ್ರ ಜಾತಿಗೆ ಸೇರಿದ ಕನಕ, ತನ್ನ ವಿಶಿಷ್ಟ ವ್ಯಕ್ತಿತ್ವ ಹಾಗೂ ಪ್ರತಿಭೆಯಿಂದಾಗಿ ದಾಸ ಶ್ರೇಷ್ಠನೆನಿಸಿಕೊಂಡ.

ಶೂದ್ರ ಪರಂಪರೆಯಿಂದ ಬಂದ ಕನಕನದಾಸರ ಆಧ್ಯಾತ್ಮಿಕ ಪರಿಕಲ್ಪನೆ ಭಿನ್ನವಾದದು. 'ನಾವು ಕುರುಬರೋ ನಮ್ಮ ದೇವ ಬೀರದೇವರು' ಎಂದೆನ್ನುವ ಕನಕ ವೈಷ್ಣವ ಪರಂಪರೆಯನ್ನು ಅಪ್ಪಿಕೊಂಡಿದ್ದೇ ಒಂದು ಅದ್ಭುತ. ವಂಶಪಾರಂಪರ್ಯವಾಗಿ ಸಂಪಾದಿಸಿಕೊಂಡು ಬಂದಿದ್ದ ದಾಸ ಶಿಷ್ಯರ ಜ್ಞಾನಕಿಂತಲೂ ಅತ್ಯಧಿಕ ಜ್ಞಾನ ಮತ್ತು ಬುದ್ಧಿ ಮತ್ತೆಯುಳ್ಳವ ಕನಕ.

**ದೃಷ್ಟಾಂತ ಒಂದು:** ಒಮ್ಮೆ ಗುರು ವ್ಯಾಸರಾಯರು ಬಾಳೆ ಹಣ್ಣನ್ನು ಕೊಟ್ಟು ಯಾರು ಕಾಣಿಸದ ಸ್ಥಳದಲ್ಲಿ ತಿನ್ನುವಂತೆ ಹೇಳಿದರು. ಕನಕನನ್ನು ಹೊರತುಪಡಿಸಿ ಎಲ್ಲ ಶಿಷ್ಯಂದಿರು ಬಾಳೆಹಣ್ಣನ್ನು ತಿಂದಿದ್ದರು. ಬಾಳೆ ಹಣ್ಣನ್ನು ನೀನು ಯಾಕೆ ತಿನ್ನಲಿಲ್ಲ ಎಂಬ ಗುರುಗಳ ಪ್ರಶ್ನೆಗೆ ಉತ್ತರವಾಗಿ 'ಎಲ್ಲೆಲ್ಲ ದೇವನೆ ಇದ್ದು, ಯಾರು ಇಲ್ಲದ ಸ್ಥಳ ನನಗೆ ಸಿಗದ ಕಾರಣ ಹಣ್ಣನ್ನು ತಿನ್ನಲಿಲ್ಲ'. ಎಂಬ ಕನಕನ ಬೌದ್ಧಿಕ ಪ್ರಜ್ಞೆ ವ್ಯಾಸರಾಯರಿಗೆ ಮೆಚ್ಚಿಗೆಯಾಯಿತು. ಇದಷ್ಟೇ ಅಲ್ಲ; ವಂಶಗತವಾಗಿ ಸಂಪಾದಿಸಿಕೊಂಡು ಬಂದಿದ್ದ ಪುರೋಹಿತ ಶಾಹಿಯ ಬದುಕಿಗೆ ಕೊಡಲಿ ಪೆಟ್ಟುಕೊಟ್ಟಂತೆ ಕಂಡು ಬರುತ್ತದೆ.

**ದುಷ್ಟಾಂತ ಎರಡು :** ಗುರುಗಳು ಶಿಷ್ಯರನ್ನು ಉದ್ದೇಶಿಸಿ ನಿಮ್ಮಲ್ಲಿ ಯಾರು ಮೋಕ್ಷಕ್ಕೆ ಹೋಗುತ್ತೀರಿ ಎಂದು ಪ್ರಶ್ನಿಸಿದರು. ಯಾರಲ್ಲೂ ಉತ್ತರ ಇರಲಿಲ್ಲ, ದೂರದೃಷ್ಟಿ ಜ್ಞಾನವುಳ್ಳ ಕನಕ 'ನಾನು ಹೋದರೆ ಹೋದೆನು' ಎಂಬ ಉತ್ತರದಿಂದ ಉಳಿದೆಲ್ಲ ಶಿಷ್ಯರು, ಏನು ಅಹಂ ಇವನಿಗೆ ಎಂದೆಲ್ಲ ಮಾತನಾಡಿಕೊಳ್ಳ ಹತ್ತಿದ್ದರು. ಆಗ 'ನಾನು ಎಂಬ ಅಹಂಮಿಕೆಯನ್ನು ನಾನೆ ಎಲ್ಲವು ನನ್ನಿಂದಲೇ ಎಲ್ಲವು ಎನ್ನುವ ಗರ್ವವನ್ನು ಮೀರಿ ನಿಂತವನು ಮಾತ್ರ ಮೋಕ್ಷಕ್ಕೆ ಹೋಗಲು ಸಾಧ್ಯವೆಂದು' ಕನಕ ಉತ್ತರಿಸಿದ. ಮುಂದುವರೆದು ಕನಕದಾಸರು ಜಾತಿ–ಮತ,ಆಸ್ತಿ–ಅಂತಸ್ತು, ಪಾಂಡಿತ್ಯ–ಪ್ರತಿಭೆ, ಪುರುಷ ಹಾಗೂ ಯಜಮಾನ್ಯದಂತಹ ಅಹಮ್ಮಿಕೆಯನ್ನು ನಿರಾಕರಿಸಿದರೆ ಯಾರು ಬೇಕಾದರು ಮೋಕ್ಷವನ್ನು ಪಡೆಯಬಹುದು ಎಂದು ಹೇಳಿ ವ್ಯಾಸರಾಯರಿಂದ ಮೆಚ್ಚುಗೆಯನ್ನು ಗಳಿಸಿದರು. ಆದರೆ ಹರಿದಾಸ ಶಿಷ್ಯರಿಗೆ ಇದು ಸರಿ ಎನಿಸಿರಲಿಕ್ಕಿಲ್ಲ. ಅಂತೆಯೇ ಶ್ರೀಮಠದಲ್ಲಿ ಎರಡು ಕೂಟಗಳಿದ್ದುವೆಂದು ತಿಳಿದು ಬರುತ್ತದೆ. ಒಂದು ವ್ಯಾಸಕೂಟ ಇನ್ನೊಂದು ದಾಸಕೂಟ. ಈ ಎರಡು ಕೂಟಗಳಲ್ಲಿ ಆಗಾಗ ತಿಕ್ಕಾಟ ನಡೆದೇ ಇರುತ್ತಿತ್ತು[೨] ವ್ಯಾಸ ಹಾಗೂ ದಾಸ ಕೂಟದಲ್ಲಿ ತಾತ್ವಿಕ ಭಿನ್ನತೆಗಳನ್ನು ಕಿತ್ತೊಗೆದು ಮುನ್ನೆಡಿಸಿದ್ದು ವ್ಯಾಸರಾಯನ ದೊಡ್ಡ ಗುಣ.

**ರಾಮಧಾನ್ಯ ಚರಿತ್ರೆ– ಆಹಾರ ಸಾಂಸ್ಕೃತಿಕ ಸಂಘರ್ಷ :**

ಭಾರತೀಯ ಸಂಸ್ಕೃತಿಯಲ್ಲಿ ಭಕ್ತಿಯೇ ಬದುಕಿನ ಬೆನ್ನೆಲುಬು. ಭಕ್ತಿ ಎಂಬುದು ಮೇಲ್ನೋಟಕ್ಕೆ ತೋರುವ ಸಾಧನವಲ್ಲ. ಅದು ಅಂತರಂಗದ ಆನಂದಕ್ಕೆ ಸಂಬಂಧಿಸಿದ್ದು. ರಾಮನ ಮಹಿಮೆಯನ್ನು ಸಾರುವುದು ಕನಕನ ಉದ್ದೇಶ ಆಗಿರುವುದಾದರೂ ಸ್ವಕಲ್ಪಿತ ಕಥೆಯೊಂದರ ಮೂಲ ದ್ರವ್ಯವಾಗಿ ರಾಗಿ ಮತ್ತು ಭತ್ತವನ್ನು ಮುಖಾಮುಖಿಯಾಗಿಸುವ ಮೂಲಕ ಎರಡು ಆಹಾರ ಧಾನ್ಯಗಳಲ್ಲಿ ಸಾಂಸ್ಕೃತಿಕ ಸಂಘರ್ಷವನ್ನು ಏರ್ಪಡಿಸಿ, ಸಮ–ಸಮಾಜವನ್ನು ನಿರ್ಮಾಣ ಮಾಡುವುದು ಕನಕನ ಮೂಲೋದ್ಧೇಶ ಆಗಿರಬಹುದು ಎಂಬುದಕ್ಕೆ ರಾಮಧಾನ್ಯ ಚರಿತ್ರೆ ಸಾಕ್ಷಿಯಾಗಿ ನಿಂತುಕೊಳ್ಳುತ್ತದೆ.

ರಾಮ ಮತ್ತು ಧಾನ್ಯದ ಚರಿತ್ರೆಯನ್ನು ಒಟ್ಟೊಟ್ಟಿಗೆ ಕಟ್ಟಿಕೊಡುವ ಕ್ರಿಯೆ ಅದ್ಭುತ. ಇದು ಭಾರತೀಯ ಬದುಕಿನ ಸಾಂಸ್ಕೃತಿಕ ಜಗತ್ತನ್ನು ಬಿಚ್ಚಿಡುತ್ತಾ ಹೋಗುತ್ತದೆ. ದೇ.ಜವರೇಗೌಡರಿಗೆ ರಾಮಧಾನ್ಯ ಚರಿತ್ರೆ ಸ್ಪೃಶ್ಯ–ಅಸ್ಪೃಶ್ಯರ ನಡುವಣ ವರ್ಗ ಸಂಘ್ರದ ಹೋರಾಟವಾಗಿ ಕಂಡಿದ್ದರೆ ಹಿ.ಶಿ.ರಾಮಚಂದ್ರೇಗೌಡರಿಗೆ ಬಂಡಾಯದ ದನಿಯಾಗಿ ಕೇಳಿಸಿದೆ. ಸಂಶೋಧಕ ಡಾ.ಚಿದಾನಂದಮೂರ್ತಿಯವರಿಗೆ ಬಡವ ಮತ್ತು ಶ್ರೀಮಂತರ ಕುರಿತ ಚರಿತೆಯಾದರೆ, ಡಾ.ಸ.ಶಿ.ಮರುಳಯ್ಯನವರಿಗೆ ಸಂಸ್ಕೃತ ಮತ್ತು ಕನ್ನಡ ನಡುವಿನ ಭಾಷಾ ವಾದವಾಗಿ ಕಂಡಿದೆ[೩]. ವಿದ್ವಾಂಸರ ಅಭಿಪ್ರಾಯಗಳೇನೆ ಇದ್ದರೂ, ಭಾರತೀಯರ ಬದುಕಿನಲ್ಲಿ ಸಾಂಸ್ಕೃತಿಕ ಸಂಘರ್ಷ ಏರ್ಪಟ್ಟಿದ್ದಂತೂ ಸತ್ಯ.

ವಿಜಯನಗರದ ಅರಸ ಕೃಷ್ಣದೇವರಾಯನ ಕಾಲದಲ್ಲಿ ಕನ್ನಡ ನಾಡಿನ ಉದ್ದಗಲಕ್ಕೂ ಭಕ್ತಿ ಸಾಹಿತ್ಯ ಎಂಬುದು ಮಹಾಪೂರವಾಗಿ ಉಕ್ಕಿ ಹರಿಯುತ್ತಿತ್ತು. ನಮ್ಮ ನೆಲ–ಜಲ, ಕುರಿ–ಕೋಳಿ, ಪಶು–ಪಕ್ಷಿ, ರಾಗಿ–ಭತ್ತಗಳು ಕವಿಗಳ ಕಾವ್ಯದ ಭಕ್ತಿಯ ವಸ್ತುಗಳಾಗಿ ಪರಿಣಮಿಸಿದ್ದುವು. ವಿಶೇಷವಾಗಿ ೧೫ನೆಯ ಶತಮಾನದ ದಾಸರು ಶ್ರೀ ಸಾಮಾನ್ಯರ ಹತ್ತಿರಕ್ಕೆ ಭಕ್ತಿಯೆಂಬ ರಸವನ್ನು ಹರಿಯಿಸಿದರು. ಈ ಹಿನ್ನೆಲೆಯಲ್ಲಿ ಶೂದ್ರ ಪರಂಪರೆಯಿಂದ ಮೇಲೆ ಬಂದ ಕನಕದಾಸರು, ತನ್ನ ಸುತ್ತಲ ಬದುಕಿನ ಸಂಗತಿಗಳನ್ನೇ ಕಾವ್ಯ ಮತ್ತು ಕೀರ್ತನೆಯ ವಸ್ತುವಾಗಿಸಿಕೊಂಡು ಜನಸಾಮಾನ್ಯರ ಮನ ಮತ್ತು ಮನೆಗಳಿಗೆ ತಲುಪುವಂತೆ ಮಾಡಿದರು. ಹೀಗೆಂದ ಮಾತ್ರಕ್ಕೆ ಕನಕದಾಸರು ಬೆಳೆದು ಬಂದ ದಾರಿ ಸುಗಮವೆಂದು ಭಾವಿಸುವಂತಿಲ್ಲ. "ಪ್ರತಿರೋಧವನ್ನು ಮೀರಿ ನಡೆಯುವ ಶ್ರೀ ಸಾಮಾನ್ಯ ಪ್ರತಿಭೆಯನ್ನು ಹಲವು ಹತ್ತು ರೀತಿಯಲ್ಲಿ ಹಂಗಿಸಿ ಹಿಂಸಿಸಿರುವುದು ಉಂಟು. ಕನಕದಾಸರು ಕೂಡ ಈ ವರ್ಗ ಸಂಘರ್ಷದ ಬೇಲಿಯನ್ನು ಕಿತ್ತು ಬೆಳೆದು ಬಂದರೆಂಬುದಕ್ಕೆ ಅವರ ಸಾಹಿತ್ಯದಲ್ಲಿ ವಿಫುಲವಾದ ಉದಾಹರಣೆಗಳು ದೊರೆಯುತ್ತವೆ." [೪] ಇಂತಹ ಸಮಯ ಮತ್ತು ಸಂದರ್ಭಗಳು ಸೃಷ್ಟಿಯಾದಾಗ ಆಂತರ್ಯದಲ್ಲಿ ನುಂಗಿಕೊಂಡು ಬಂದಿರುವ ಘಟನೆಗಳು ಯಾವುದೋ ಮಾಧ್ಯಮದಲ್ಲಿ ಅಭಿವ್ಯಕ್ತಿಯಾಗಿ ಕವಿಯ ಮನಸ್ಸು ನಿರಾಳವಾಗುತ್ತದೆ. ಈ ದಿಶೆಯಲ್ಲಿ ಕನಕದಾಸರ ರಾಮಧಾನ್ಯ ಚರಿತೆ ಆಹಾರ ಸಾಂಸ್ಕೃತಿಕ ಸಂಘರ್ಷಕ್ಕೆ ಜ್ವಲಂತ ಉದಾಹರಣೆ. ವ್ಯಕ್ತಿ ತಾನು ಎಷ್ಟೇ ಎತ್ತರಕ್ಕೆ ಬೆಳೆದರೂ ಮತ್ತು ಜೀವನ ನಿರ್ವಹಣೆಗಾಗಿ ತನ್ನ ಮೂಲಸ್ಥಾನವನ್ನು ಬಿಟ್ಟು ಬೇರೆಡೆ ವಾಸವಾಗಿದ್ದರು, ತಾನು ಹುಟ್ಟಿದ ಮಣ್ಣಿನ ಪರಿಸರ, ಜೀವನದ ರೀತಿ–ನೀತಿ, ಆಹಾರ, ದೇವರು–ದಿಂಡಿರನ್ನು ಎಂದೆಂದಿಗೂ ಮರೆಯುವುದಿಲ್ಲ.[೫]ಈ ರೀತಿಯಾಗಿ ಕವಿ, ಕಲಾವಿದ ತನ್ನೊಳಗಿನ ಅನುಭವಗಳನ್ನು ಕೃತಿಗಳಲ್ಲಿ ಹೇರಳವಾಗಿ ಹರಿಯ ಬಿಟ್ಟಿರುವುದು ಕಂಡು ಬರುತ್ತದೆ. ಈ ದೃಷ್ಟಿಯಿಂದ ರಾಮಧಾನ್ಯಚರಿತೆ ಮತ್ತೆ–ಮತ್ತೆ ಓದಿ ಅರ್ಥೈಸಿಕೊಳ್ಳಬೇಕಾದ ಅಗತ್ಯತೆ ಇದೆ.

ಕವಿ ಕನಕದಾಸರು ರಾಮಧಾನ್ಯ ಚರಿತೆಯನ್ನು ಮಹಾಕಥೆಯೆಂದು ಹೆಮ್ಮೆಯಿಂದ ಹೇಳಿಕೊಂಡಿದ್ದಲ್ಲದೆ, ಇಡೀ ಜನಸ್ತೋಮವೇ ಅರಿಯಬೇಕೆಂದು ಆಶಿಸುವ ಪದ್ಯ.

ರಾಮಧಾನ್ಯದ ಕೃತಿಯನೀ ಜನ
ಸ್ತೋಮವೆಲ್ಲಾದರಿಸುವಂದದಿ
ಭುವಿಗಚ್ಚರಿಯಾಗಿ ಪೇಳುವೆನೀ ಮಹಾಕಥೆಯ[೬]

ಕನಕದಾಸರು ಹೀಗೆ ಹೇಳುವದರ ಹಿಂದೆ ಘನವಾದ ಉದ್ದೇಶ ಇರಲೇಬೇಕು. ಈ ಕಥೆ ರಾಮನ ಮೇಲಿನ ಭಕ್ತಿಯ ಮಹಿಮೆಯನ್ನು ಕೊಂಡಾಡುವದು ಒಂದೆಡೆಯಾದರೆ, ಆ ಕಾಲದ ಸಾಮಾಜಿಕ, ಧಾರ್ಮಿಕ ಪರಿಸರ, ಜನಜೀವನ, ಬದುಕಿನ ಸ್ಥಿತ್ಯಂತರದ ಜೊತೆಗೆ ಶೂದ್ರ ವರ್ಗದ ಬದುಕಿನ ವಿಕಸನದ ಕಥೆಯೂ ಇಲ್ಲದೆ. "ವಿದ್ವತ್ತು, ಪ್ರತಿಭೆ, ಅರ್ಹತೆಗಳಲ್ಲಿ ತಮ್ಮ ಸ್ವತ್ತು ಎಂದು ತಿಳಿದ ಜನರ ಕುತಂತ್ರದ ಬಿಸಿ ಕವಿಗೆ ಹೆಜ್ಜೆ–ಹೆಜ್ಜೆಗೆ ಚುಚ್ಚಿ ನೋಯಿಸಿರಬೇಕು."[೭] ಇದರಿಂದ ಮಾನಸಿಕವಾಗಿ ನೊಂದು–ಬೆಂದ ಕನಕದಾಸರು ಕಾವ್ಯ ಮಾಧ್ಯಮದ ಮೂಲಕ ರಾಗಿಯನ್ನು ಶೂದ್ರ ವರ್ಗದ ಪ್ರತಿನಿಧಿಯಾಗಿ, ಭತ್ತ ಮೇಲ್ವರ್ಗದವರ ಪ್ರತಿನಿಧಿಯಾಗಿ ಎರಡು ವರ್ಗಗಳಲ್ಲಿ ಸಾಂಸ್ಕೃತಿಕ ಸಂಘರ್ಷವನ್ನು ಏರ್ಪಡಿಸಿ ಸ್ಪೃಶ್ಯರೆಂದು ಅಹಂನಿಂದ ಮೆರೆಯುವ ಸಮಾಜದ ಮೇಲ್ವರ್ಗದವರಲ್ಲಿ ಅರಿವು ಮೂಡಿಸಲು ಪ್ರಯತ್ನಿಸಿರಬೇಕು. ಆಹಾರ ಧಾನ್ಯಗಳಲ್ಲಿ ಹೋಲಿಕೆ ಹಾಗೂ ಅಸಮತೋಲನದ ಸಮಸ್ಯೆಯನ್ನು ಬಿಡಿಸಲು ಸಾಂಸ್ಕೃತಿಕ ಸಂಘರ್ಷಗಳನ್ನು ಉಂಟುಮಾಡಿ ಭೂಮಿಗೆ ಅಚ್ಚರಿಯಾಗಿ ಪೇಳುವೆನ್ ಈ ಕಥೆಯ ಎಂದಿರುವ ಸಾಧ್ಯತೆಯಿದೆ.

ಧರ್ಮರಾಜ ಪರಿವಾರ ಸಮೇತವಾಗಿ ಕಾಮ್ಯಕವನದಲ್ಲಿರುವಾಗ ಅಲ್ಲಿಗೆ ಆಗಮಿಸಿದ ಶಾಂಡಿಲ್ಯಮುನಿ ಧರ್ಮರಾಯರ ಇಚ್ಛೆಯಂತೆ ರಾಮನ ಗುರು–ಶ್ರೇಷ್ಠತೆಯನ್ನು ಸಾರುವ ಧರ್ಮಪಾಲನೆಯ ಗುಣವುಳ್ಳ ನರೆದ'ಲಗ ಮತ್ತು ವ್ರೀಹಿಯ ಪ್ರಸಂಗ ಕನಕದಾಸರ ಸ್ವಕಲ್ಪಿತ ಕಥೆಯಾದರೂ ಕನಿಷ್ಠರೆಂದೆನ್ನಿಸ್ಕಿಕೊಂಡು ಬದುಕು ಕಟ್ಟಿಕೊಂಡು ಪ್ರಾಮಾಣಿಕತೆಯಿಂದ ಬದುಕುವವರ ಶ್ರೇಷ್ಠ ಗುಣಗಳನ್ನು ಸಮಾಜಕ್ಕೆ ಎತ್ತಿ ತೋರಿಸುವ ಪ್ರಯತ್ನ ಹೊಸದಾಗಿ ಕಾಣಿಸಿದೆ. ವನವಾಸ ಪೂರೈಸಿ ಹಿಂದಿರುಗುವಾಗ ಗೌತಮ ಮುನಿಗಳ ಆಶ್ರಮದಲ್ಲಿ ಭಕ್ಷಭೋಜ್ಯಗಳಿಂದ ಸಂತೃಪ್ತರಾಗಿ ಆಂಜನೇಯನಿಗೆ ಧಾನ್ಯಗಳಲ್ಲಿ ಯಾವುದು ಶ್ರೇಷ್ಠವೆಂದು ಕೇಳುತ್ತಾನೆ. ಧಾನ್ಯಗಳನ್ನು ಪರೀಕ್ಷಿಸದೆ ಹೇಳುವುದು ಸಾಧ್ಯವೇ ? ನವ ಧಾನ್ಯಗಳೆಲ್ಲವನ್ನು ತಂದು ಸಮೂಹದ ಮುಂದೆ ಸುರಿಯಲು ಗೌತಮಮುನಿ ಪರೀಕ್ಷಿಸಿ:

ದಾಶರಥಿ ಚಿತ್ತೈಸು ನಮ್ಮಯ
ದೇಶಕತಿಶಯ ನರೆದಲಗನೇ
ವಾಸಿಯುಳ್ಳವನೀತ ಮಿಕ್ಕಿನ ಧಾನ್ಯಬೇಕೆ ?[೭]

ಎಂಬ ಮಾತು ಮೇಲ್ವರ್ಗದ ಪ್ರತಿನಿಧಿಯಾದ ಭತ್ತವನ್ನು ಕೆರಳಸುತ್ತದೆ. ಬಹುಸಂಖ್ಯಾತರನ್ನು ಒಳಗೊಂಡ ಸಮುದಾಯವನ್ನು ರಾಗಿ ಪ್ರತಿನಿಧಿಸಿಯೂ ಸೌಮ್ಯವಾಗಿರುತ್ತದೆ. ಕೆಳವರ್ಗದವರಲ್ಲಿರುವ ದುಡಿತದ ಸಾಮರ್ಥ್ಯ, ನ್ಯಾಯ, ನಿಷ್ಠೆ, ಸಹನೆ ಮುಂತಾದ ಒಳ್ಳೆಯ ಗುಣಗಳನ್ನು ಪರಿಗಣಿಸಿಯೇ ರಾಗಿ ಸತ್ವಯುತ ಎಂದು ಹೇಳಸಿದೆ. ಇನ್ನೊಂದಿಷ್ಟು ಮುಂದುವರೆದು ಹೇಳುವುದಾದರೆ, ರಾಗಿ ಕನಕದಾಸರನ್ನು ಭತ್ತ ಪುರಂದರದಾಸರನ್ನು ವ್ಯಾಸರಾಯರು ಗೌತಮ ಮುನಿಯನ್ನು ಪ್ರತಿನಿಧಿಸಿದಂತೆ ಭಾಸ'ವಾಗುತ್ತಾರೆ ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ.

ಋಷಿ ಗೌತಮ ನರೆದಲ(ರಾಗಿ)ಗನೇ ಸತ್ವಯುತ ಎಂದು ತೀರ್ಪು ಕೊಟ್ಟಾಗ ವ್ರೀಹಿ(ಭತ್ತ)ಗೆ ಅಪಮಾನವಾದಂತಾಗಿ ನಿಮ್ಮಂತಹ ಮುನಿಗಳೇ ಉಪೇಕ್ಷಿಸಿ ಪಕ್ಷಪಾತದ ತೀರ್ಪನ್ನು ನೀಡಬಹುದೇ ? ಎಂದು ಸಮಾಧಾನಿಯಾಗಿ ಪ್ರತಿಕ್ರಿಯಿಸಿದ ಭತ್ತ ಮೌನಿಯಾಗಿ ತನ್ನಷ್ಟಕ್ಕೆ ತಾನು ತುಟಿಪಿಟಿನ್ನದೇ ಕುಳಿತಿದ್ದ ರಾಗಿಯತ್ತ ಕೈ ತೋರಿ, ಎಲ್ಲವೋ ನರೆದಲಗ ನೀನು ನನಗೆ ಸಮಾನನೇ ಎಂದು ಪ್ರಶ್ನಿಸಿದ್ದಷ್ಟೇ ಅಲ್ಲ; "ಜಾನಕಿಪತಿ ಸನಿಹದಲಿ ಕುಲಹೀನ ನೀನು. ನಿನ್ನ ಪ್ರತಿಷ್ಠೆ ಸುಡು. ಮತಿಹೀನ ನೀನೆಂದೆನುತ"[೮] ತನ್ನ ಮಹಿಮೆಯನ್ನು ತಾನೆ ಕೊಚ್ಚಿಕೊಳ್ಳುತ್ತದೆ. ಮುಂದುವರೆದು ಬುಧರು ಜರೆದು ನಿರಾಕರಿಸಿ ಬಿಡಲು ನೀ ಶೂದ್ರಾನ್ನವಾದೆ ವಿವೇಕಿಕಗಳು ಮೆಚ್ಚುವರೆ ಸಾಕು ನಡೆ ನೀನಾವ ಮಾನ್ಯನು ಕಡೆಗೆ ತೊಲಗು"[೮] ಎಂದು ರಾಗಿಯನ್ನು ಕುರಿತು ಬೈಯ್ಯುತ್ತದೆ. ಯಾರ ತಂಟೆಗೂ ಹೋಗದ ಸ್ವಾಭಿಮಾನಿಯೋರ್ವನಿಗೆ ಅಪಮಾನವಾದಾಗ ಯಾವ ಮನುಷ್ಯ ತಾನೇ ಸುಮ್ಮನಿರಲು ಸಾಧ್ಯ ! ಭತ್ತ ಆಡಿದ ಮಾತುಗಳಿಂದ ರಾಗಿಯ ಪ್ರತಿನಿಧಿಯಾದ ಕನಕನನ್ನು ಕೆರಳಸಿರಬೇಕು. ಎಂತಹ ಸಾತ್ವಿಕ ಪುರುಷನಾದಾಗ್ಯೂ ಸ್ವಾಭಿಮಾನಕ್ಕೆ ದಕ್ಕೆ ಬಂದಾಗ ಸಹನೆಯ ಕಟ್ಟೆ ಒಡೆದು ಕೆರಳದಾಗ ಕನಕನಾಡಿದ ಮಾತುಗಳು.

ನುಡಿಯ ಕೇಳುತ ಕನಲಿ ಕಂಗಳು
ಕಿಡಿ ಮಸಗಿ ಖತಿಗೊಂಡು ನುಡಿದನು
ಸಿಡಿಲು ಘರ್ಜನೆಯಂತೆ ಸಭೆಯ'ಲಿ ಜರಿದನಾ ವ್ರಿಹಿಯಾ
ನುಡಿಗೆ ಹೇಸದ ಭಂಡ ನಿನ್ನೊಳು
ಕೊಡುವರೇ ಮಾರುತ್ತರವ ಕಡು
ಜಡನಲಾ ನಿನ್ನೊಡನೆ ಮಾತೇಕೆ'ಂದ ನರೆದಲಗ[೯]

ಶೂದ್ರರ ಧ್ವನಿಯಾಗಿ ಪ್ರತಿನಿಧಿಸುವ ಕನಕದಾಸರು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ನಿಯಮಗಳೆಲ್ಲವನ್ನು ಗಾಳಿಗೆ ತೂರಿ ತನ್ನ ಸಮುದಾಯದ ಸ್ವಾಭಿಮಾನವನ್ನು ಎತ್ತಿ ಹಿಡಿದಿದ್ದನ್ನು ಕಾಣಬಹುದು.

ನರೆದಲಗ(ರಾಗಿ) ಮತ್ತು ವ್ರೀಹಿ (ಭತ್ತ) ಈ ಎರಡು ಜಾತಿಗಳಲ್ಲಿ ಆಹಾರ ಕುರಿತಾದ ಸಾಂಸ್ಕೃತಿಕ ಸಂಘರ್ಷ ಏರ್ಪಟ್ಟು ವಾಕ್‌ಯುದ್ಧವೇ ನಡೆಯುತ್ತದೆ. ಭತ್ತ ತನ್ನತನದ ಮಹಿಮೆಯನ್ನು ಕೊಚ್ಚಿಕೊಳ್ಳುತ್ತದೆ. ಹೀಗೆ ಅಮರರ ಉಪನಯಕ್ಕೆ ಸುವೃತ, ಸುಬೇಲಿ ಜನ, ಪರಮ ಮಂತ್ರಾಕ್ಷತೆ, ದೇವರ ನೈವೇದ್ಯ, ಬ್ರಾಹ್ಮಣರ ಸಮಾರಾಧನೆ, ಮುದುಮಕ್ಕಳ ಸೇವನೆಗೆ, ಗಂಧಾಕ್ಷತೆಯಿಡುವ ವಿಪ್ರಕುಲಕ್ಕೆ ನಾನೇ ಮೊದಲಿಗ. ನೀನು ನನಗೆ ಯಾವುದರಲ್ಲಿ ಸಮ ಎಂದಾಗ, ಕಟು ನುಡಿಗಳಿಂದ ರಾಗಿ ಹೇಳುವುದು ಹೀಗೆ–ನುಡಿಗೆ ಹೇಸದ ಭಂಡ, ಸತ್ಯಹೀನನು ನೀನು, ಬಡವರನು ಕಣ್ಣೆತ್ತಿನೋಡೆ, ಬಾಣಾಂತಿಯರಿಗೆ , ರೋಗಿಗಳಿಗೆ ಪಥ್ಯದ ಆಹಾರ, ಹೆಣದ ಬಾಯಿಗೆ ತುತ್ತು ಎಳ್ಳು ದರ್ಬೆಗೆ ತೆತ್ತಿದನು, ನಿನ್ನ ಜನ್ಮ ನಿರರ್ಥಕ. ಮಳೆದೆಗೆದು ಬೆಳೆಯಡಗಿ ಕ್ಷಾಮ ಕಾಲದೇಳ ಅಳಿವ ಪ್ರಾಣಿಗಳನ್ನಾಧರಿಸಿ ಸಲಹಿದವ ನಾನು, ಬಡವ ಬಲ್ಲಿದನೆಂಬ ಪಕ್ಷಪಾತಿ ನೀನು, ಎಲ್ಲರನು ಸಲಹುವ ಸಮದರ್ಶಿ ನಾನು. ನೀನು ಸತ್ತವರ ಪ್ರತಿಬಿಂಬ. ಹೆಚ್ಚೇನು ನಪುಂಸಕ. ನಿನ್ನೊಡನೆ ವಾದ ಮಾಡುವುದು ಅನುಚಿತ. ಎಂದೆಲ್ಲ ಸಮರೋಪಾದಿಯಲ್ಲಿ ಸಾರುತ್ತಿರಬೇಕಾದರೆ ಶ್ರೀರಾಮಚಂದ್ರನು ದ್ವೇಷ, ಅಸೂಯೆ ಹೆಚ್ಚಿ ವಿಕೋಪಕ್ಕೆ ಹೋಗುವ ಮುನ್ನ ಈರ್ವರನ್ನು ಸೆರೆಮನೆಗೆ ತಳ್ಳಿದ. ಆರು ತಿಂಗಳ ತರುವಾಯ ನರೆದಲೆಗ ಮತ್ತು ವ್ರೀಹಿಯರನ್ನು ಅಯೋಧ್ಯೆಗೆ ಕರೆ ತಂದು ಸಭೆ ಸೇರಿಸಿದ.

ಎಲ್ಲ ಧಾನ್ಯಗಳಲಿ ಈತನೇ
ಬಲ್ಲಿದನು ಹುಸಿಯಲ್ಲ ಬಡವರ
ಬಲ್ಲಿದನಾರೈದು ಸಲಹುವವನಿಗೆ ಸರಿಯುಂಟೆ
ನೆಲ್ಲಿನಲಿ ಗುಣವೇನು ಭಾಗ್ಯದಿ
ಬಲ್ಲಿದರ ಪತೀಕರಿಸುವನು ಅವನಲ್ಲಿ
ಸಾರುವ ಕಾಗೆಯೆಂದನು ಕಪಿಲಮುನಿ ಸ'ಹಿತ[೧೦]

ದೇವೇಂದ್ರನಾದಿಯಾಗಿ ಎಲ್ಲರು ನರೆದಲಗನ ಗುಣವನ್ನು ಹೊಗಳದ್ದು ಶೂದ್ರ ಸಮುದಾಯಕ್ಕೆ ಸೇರಿದ ಜಯ, ಜಾತಿಯಿಂದ ಶೂದ್ರನಾದರೂ ಒಳ್ಳೆಯ ಗುಣಗಳಿಂದ ಮೇಲಸ್ಥರಕ್ಕೆ ಏರಿ ಉನ್ನತ ಸ್ಥಾನಮಾನಗಳನ್ನು ಪಡೆಯಬಲ್ಲ ಎಂಬುದಕ್ಕೆ ಕನಕದಾಸ ಸಾಕ್ಷಿಯಾಗಿ ನಿಂತು ಕೊಳ್ಳುತ್ತಾನೆ. ಕನಕದಾಸ ಪ್ರಾರಂಭದಲ್ಲಿ ಆಹಾರ ಸಾಂಸ್ಕೃತಿಕ ಸಂಘರ್ಷವನ್ನು ಉಂಟುಮಾಡುವನೆಂದು ಕೊಂಡಂತೆ ಆಹಾರ ಧಾನ್ಯಗಳ ಮೂಲಕ ಸಾಂಸ್ಕೃತಿಕ ಸಮನ್ವಯತೆಯನ್ನು ಸಾಧಿಸಲು ಹೊರಟಿದ್ದಾನೆಂಬಂತೆ ಗೋಚರಿಸುವ ಪದ್ಯ.

ಮರುಳೆ ಬಾರೈ ವ್ರೀಹಿಯ ಮನದಲಿ
ಕೊರಗಿ ಚಿಂತಿಸಬೇಕೆ ಎಂದು ರಾಮ

ವ್ರೀಹಿಯನ್ನು ಕರೆದು ಬೆನ್ನು ತಟ್ಟಿ ಮುಂದುವರೆದು ನೀ ಸುರದೇನುವಿನ ಸಮ ಚಿತ್ರದಿ ಹಾನಿಮೊರಲವೇಕೆ ಬಿಡು ಬಿಡು ಚಿಂತೆ ಎಂದು ಸಂತೈಸುವ ಕೆಲಸ ಮಾಡುತ್ತಾನೆ. ಪರೀಕ್ಷೆಗೆ ಒಳಗಾದ ರಾಗಿ, ಮುನಿಗಳು ಮತ್ತು ದೇವಲೋಕದವರಿಂದ ಸತ್ವಯುತವೆಂದು ಕರೆಸಿಕೊಂಡಾಗಲೂ ರಾಮನಿಗೆ ಭತ್ತವನ್ನು ಸಂಪೂರ್ಣವಾಗಿ ಬಿಟ್ಟು ಕೊಡಲು ಮನಸ್ಸು ಒಪ್ಪುವದಿಲ್ಲ, ಸ್ವತಃ ಭತ್ತದ ಪ್ರತಿನಿಧಿಯಾಗಿರುವ ರಾಮ ಅದೇಗೆ ಸಮುದಾಯವನ್ನು ಬಿಟ್ಟು ಬದುಕಲು ಸಾಧ್ಯ ಎಂಬ ಸಂಶಯದ ಹೇಳಿಕೆಗೆ ಎಡೆ

ಮಾಡಿಕೊಡುವವದಾದರೂ ಸ್ವತಃ ಕನಕದಾಸರು ರಾಗಿಯ ಪ್ರತಿನಿಧಿಯಾಗಿಯೂ ಹುಟ್ಟಿನಿಂದ ಯಾರು ಮೇಲಲ್ಲ! ಯಾರು ಕೀಳಲ್ಲ ಎಂಬ ತಾತ್ವಿಕ ವಿಚಾರಗಳುಳ್ಳವರಾಗಿದ್ದರು. ಮನುಷ್ಯ ಬದುಕಿಗೆ ಬೇಕಾದ ಆಹಾರ, ಸತ್ವ, ನಿಸ್ವಾರ್ಥವೆಂದು ಜರೆಯಲು ಒಪ್ಪದೇ ಆಹಾರ ಸಾಂಸ್ಕೃತೀಕರಣ ಉಂಟು ಮಾಡಿ, ಎರಡು ಆಹಾರಗಳು ಮನುಷ್ಯ ಬದುಕಿಗೆ ಅಗತ್ಯವು ಮತ್ತು ಅನಿವಾರ್ಯವು ಎಂದು ಅರ್ಥೈಸಿಕೊಂಡು ರಾಮ ಭತ್ತವನ್ನು ಸಂತೈಸುವ ಕೆಲಸ ಮಾಡಿದ್ದು ಶ್ಲಾಘನೀಯ ಕಾರ್ಯವಾಗಿದೆ. ಶೂದ್ರನಾದ ಕನಕ ಏನೆಲ್ಲ ಕಹಿ ಅನುಭವಗಳನ್ನು ಬದುಕಿನಲ್ಲಿ ಉಂಡನಾದರೂ ವೈಷ್ಣವ ಪರಂಪರೆಯನ್ನು ಬಿಟ್ಟು ಹೊರ ಬರಲು ಕನಕ ಮನಸು ಮಾಡಲಿಲ್ಲ. ಎಂದಾದರೆ 'ಈಸಬೇಕು ಇದ್ದು ಜಯಿಸಬೇಕು' ಎಂಬ ಆಶಾಭಾವನೆ ಕನಕದಾಸನದಾಗಿತ್ತು. ವ್ಯಕ್ತಿತ್ವ ಮತ್ತು ಪ್ರತಿಭೆಯಿಂದ ಕನಕದಾಸನಷ್ಟು ಪ್ರತಿಭಾ ಸಂಪನ್ನರು ಹರಿದಾಸರಲ್ಲಿ ಮತ್ತೊಬ್ಬನಿರಲಿಲ್ಲ. ಕಾವ್ಯ ಕಟ್ಟುವ ಕಲೆ ಎಷ್ಟೊಂದು ಕರಗತವಾಗಿತ್ತೆಂದರೆ ಮನುಷ್ಯ ಬದುಕಿಗೆ ಅನ್ನ ಮುಖ್ಯವೆಂದು ಸಾರಲು ಹೊರಟರು, ಬಹುಸಂಖ್ಯಾತರನ್ನು ಬದುಕಿಸುವ ಅನ್ನವೇ ಸತ್ವವು ಮತ್ತು ಶ್ರೇಷ್ಠವು ಎಂಬ ನಿರ್ಣಯಕ್ಕೆ ಬರುವದಾದರೂ ಆ ಹಸಿದ ಹೊಟ್ಟೆಗೆ ಅನ್ನ ಯಾವುದಾದರೇನು ? ಜೀವ ಹಿಡಿಯಲು ಒಂದು ತುತ್ತು ಸಾಕು ಎಂಬ ತತ್ವವನ್ನು ಅರಿತದ್ದರಿಂದಾಗಿಯೇ ಮನುಷ್ಯ ಕುಲ ಶ್ರೇಷ್ಠವಾದುದು. ಅದರಲ್ಲಿ ಮೇಲು ಕೀಳಿನ ಪ್ರಶ್ನೆ ಎಲ್ಲಿಯದು. ಸರ್ವರು ಸಮಾನತೆಯಿಂದ ಬಾಳದಾಗಲೇ ಸುಖ, ಸಮೃದ್ಧಿಯ ಸಮ-ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ. ಈ ಹಿನ್ನೆಲೆಯಲ್ಲಿ ಕನಕದಾಸರ ರಾಮಧಾನ್ಯ ಚರಿತೆ ಆಹಾರ ಸಾಂಸ್ಕೃತಿಕರಣವನ್ನುಂಟು ಮಾಡಿ ಸಾಮಾಜಿಕ ಪ್ರಗತಿಯ ಜೀವಂತ ಪ್ರತಿನಿಧಿಯಾಗಿ ಕಾಣಿಸಿಕೊಂಡಿದೆ.

ಆಧಾರ ಗ್ರಂಥಗಳು :


೧.ಡಾ. ಬಂಜಗೆರೆ ಜಯಪ್ರಕಾಶ (ಸಂ) –ಕನಕ ಮರುದರ್ಶನ ಪ್ರಬಂಧಗಳ ಸಂಕಲನ,ಪ್ರಸ್ತಾವನೆ –ಪುಟ–೩ ರಾಷ್ಟ್ರೀಯ ಸಂತರು ಕ.ಅ. ಮತ್ತು ಸಂಶೋಧನ ಕೇಂದ್ರ, ಬೆಂಗಳೂರು.

೨.ಪ್ರೊ. ವಸಂತ ಕುಷ್ಠಗಿ – ದಾಸ ಸಾಹಿತ್ಯದ ತವನಿಧಿಯಲ್ಲಿ, ಶ್ರೀ ಭತ್ತರೇಶ ಪ್ರಕಾಶನ' ಗುಲಬರ್ಗಾ–೨೦೧೨ ಪು–೧೬೪

೩.ಡಾ. ಸ.ಶಿ.ಮರಳಯ್ಯ (ಸಂ)– ಕನಕ ಸಾಹಿತ್ಯ ದರ್ಶನ ಸಂಪುಟ –೨ ಪ್ರಸ್ತಾವನೆಯಿಂದ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–೧೯೯೧

೪.ಹ.ಕ.ರಾಜೇಗೌಡ– ರಾಮಧಾನ್ಯ ಚರಿತೆ (ಕನಕಾವಲೋಕನ)ಕನಕ ಸಾಹಿತ್ಯ ದರ್ಶನ ಸಂಪುಟ–೧ ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–೧೯೯೧

೫. ಡಾ. ಸ.ಶಿ.ಮರಳಯ್ಯ (ಸಂ)– ಕನಕ ಸಾಹಿತ್ಯ ದರ್ಶನ ಸಂಪುಟ –೨ ರಾಮಧಾನ್ಯಚರಿತೆ ಪದ್ಯ–೩ ಪುಟ–೩೩, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–೧೯೯೧

೬.ಹ.ಕ.ರಾಜೇಗೌಡ– ರಾಮ ಧಾನ್ಯ ಚರಿತೆ (ಕನಕ ಸಾಹಿತ್ಯ ದರ್ಶಸಂಪುಟ–೧ ನ) ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–೧೯೯೧ ಪುಟ–೬೫೩

೭.ಡಾ. ಸ.ಶಿ.ಮರಳಯ್ಯ (ಸಂ)– ಕನಕ ಸಾಹಿತ್ಯ ದರ್ಶನ ಸಂಪುಟ –೨ ರಾಮಧಾನ್ಯಚರಿತೆ ಪದ್ಯ–೩೪ ಪುಟ–೪೧, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–೧೯೯೧

೮.ಡಾ. ಸ.ಶಿ.ಮರಳಯ್ಯ (ಸಂ)– ಕನಕ ಸಾಹಿತ್ಯ ದರ್ಶನ ಸಂಪುಟ –೨ ರಾಮಧಾನ್ಯಚರಿತೆ ಪದ್ಯ–೩೬ ಪುಟ–೪೧, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–೧೯೯೧

೯.ಡಾ. ಸ.ಶಿ.ಮರಳಯ್ಯ (ಸಂ)– ಕನಕ ಸಾಹಿತ್ಯ ದರ್ಶನ ಸಂಪುಟ –೨ ರಾಮಧಾನ್ಯಚರಿತೆ ಪದ್ಯ–೪೪ ಪುಟ–೪೩, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–೧೯೯೧

೧೦. ಡಾ. ಸ.ಶಿ.ಮರಳಯ್ಯ (ಸಂ)– ಕನಕ ಸಾಹಿತ್ಯ ದರ್ಶನ ಸಂಪುಟ –೨ ರಾಮಧಾನ್ಯಚರಿತೆ ಪದ್ಯ–೧೩೫ ಪುಟ–೬೬, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–೧೯೯೧